# ನಿಮ್ಮೊಡನೆ

## ಗಾಳಿಬೆಳಕಿನ ಹಂಬಲ

ಆತ್ಮಗೌರವ ಎನ್ನುವ ಮಾತಿಗೆ ಪೊಲೀಸ್ ಇಲಾಖೆಯಲ್ಲಿ ಅರ್ಥವೇ ಇದ್ದಂತಿಲ್ಲ. ಅಧಿಕಾರಿಗಳು ತಮ್ಮ ಕೈಕೆಳಗಿನವರನ್ನು ಕೊಳಕು ಭಾಷೆಯಲ್ಲಿ ಮಾತನಾಡುವುದು ಸ್ವಾಭಾವಿಕ ಎನ್ನುವಂತಾಗಿದೆ. ಹೇಳಿಕೇಳಿ, ಪೇದೆಗಳು ಪೊಲೀಸ್ ಇಲಾಖೆಯಲ್ಲಿ 'ಕನಿಷ್ಠ ಬಿಲ್ಲೆ'ಗಳು! ಅವರು ಕ್ಷೀಣ ಧ್ವನಿಯಲ್ಲಿ ಪ್ರತಿಭಟಿಸಿದರೂ ವರ್ಗಾವಣೆಯ ಆದೇಶ ಬೆನ್ನಿಗೇ ಇರುತ್ತದೆ.

ಬೆಂಗಳೂರಿನ ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಿಂದ ನಡೆದ ಸಬ್ ಇನ್‌ಸ್ಪೆಕ್ಟರ್ ಕೊಲೆಯ ಪ್ರಕರಣ ಸಾರ್ವಜನಿಕರನ್ನು ಬೆಚ್ಚಿಬೀಳಿಸುವಂತಹದ್ದು. ಮೃತ ಅಧಿಕಾರಿಯ ಬಗ್ಗೆ ಸಂತಾಪ ವ್ಯಕ್ತಪಡಿಸುವುದರ ಜೊತೆಗೆ ಪೇದೆಗಳ ಕಾರ್ಯ ವೈಖರಿಯ ಪುನರ್ ವಿಶ್ಲೇಷಣೆಗೂ ಈ ಪ್ರಕರಣ ಕಾರಣವಾಗಬೇಕಿದೆ. ನಾಲ್ಕು ವರ್ಷದ ಹಿಂದೆ ಮೈಸೂರಿನಲ್ಲಿ ಇಂತಹುದೇ ಘಟನೆ ನಡೆದಿತ್ತು. ರಜೆಯ ವಿಚಾರದಲ್ಲಿ ತಕರಾರು ಮಾಡಿದರೆಂದು ಕೆಎಸ್‌ಆರ್‌ಪಿ ಇನ್‌ಸ್ಪೆಕ್ಟರ್ ಒಬ್ಬರನ್ನು ಪೇದೆಯೊಬ್ಬರು ಗುಂಡು ಹಾರಿಸಿ ಕೊಂದಿದ್ದರು. ನಂತರ ತಾವೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ರಜೆ ಕೊಡದ ಕಾರಣಕ್ಕೆ ತಮ್ಮ ಮೇಲಧಿಕಾರಿಗಳಿಗೆ ಗುಂಡಿಕ್ಕುವ ಪೇದೆಗಳ ಕೃತ್ಯವನ್ನು ಯಾವ ಕಾರಣದಿಂದಲೂ ಸಮರ್ಥಿಸಿಕೊಳ್ಳಲಾಗದು. ಆದರೆ, ಪೇದೆಗಳ ಮಾನಸಿಕ ಸ್ವಾಸ್ಥ್ಯ ಹಾಳು ಮಾಡುವಂತಹ ಪರಿಸ್ಥಿತಿ ಅವರು ಕೆಲಸ ಮಾಡುವ ಪರಿಸರದಲ್ಲೇ ಸೃಷ್ಟಿಯಾಗುತ್ತಿರುವ ವಿಪರ್ಯಾಸವನ್ನು ಗಮನಿಸಬೇಕಾಗಿದೆ.

ಪೊಲೀಸ್ ವ್ಯವಸ್ಥೆಯಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ಪೇದೆಗಳ ವೃತ್ತಿಜೀವನ ಕತ್ತಿಯ ಮೇಲಿನ ಸಾಮಿನಂತಹದು. ಜನಸಾಮಾನ್ಯರ ಪಾಲಿಗೆ ಪೊಲೀಸ್ ಪೇದೆಗಳದು ಅಧಿಕಾರ–ದರ್ಪದ ಹುದ್ದೆಯಂತೆ ಕಾಣಿಸಬಹುದು. ಆದರೆ ಬಹಳಷ್ಟು ಮೇಲಧಿಕಾರಿಗಳ ಕಣ್ಣಿಗೆ ಪೇದೆಗಳಿಗೂ ಊಳಿಗದವರಿಗೂ ಅಷ್ಟೇನೂ ವ್ಯತ್ಯಾಸಗಳು ಇದ್ದಂತಿಲ್ಲ. ಚಳ್ಳಕೆರೆಯಲ್ಲಿನ ಪೊಲೀಸ್ ಅಧಿಕಾರಿಯೊಬ್ಬರ ಮನೆಯ ನಿರ್ಮಾಣಕ್ಕೆ ಕಾರ್ಮಿಕರ ರೂಪದಲ್ಲಿ ಪೇದೆಗಳನ್ನು ದುಡಿಸಿಕೊಳ್ಳುತ್ತಿದ್ದ ಪ್ರಕರಣ ಈಚೆಗಷ್ಟೇ ಬೆಳಕಿಗೆ ಬಂದಿದೆ. ಅಧಿಕಾರಿಗಳ ಹೆಂಡತಿಯರ ಶಾಪಿಂಗ್ ಬ್ಯಾಗುಗಳನ್ನು ಹೊರಲು, ಅವರ ಮನೆಗೆ ತರಕಾರಿ ತರಲು, ಮಕ್ಕಳನ್ನು ಶಾಲೆಗೆ ಬಿಟ್ಟುಬರಲು, ಕೈತೋಟಕ್ಕೆ ನೀರೆರೆಯಲು– ಹೀಗೆ, ಪೊಲೀಸ್ ಸಮವಸ್ತ್ರವನ್ನು ಅವಮಾನಿಸುವ ಅನೇಕ ಕೆಲಸಗಳಿಗೆ ಪೇದೆಗಳು ಅನಿವಾರ್ಯವಾಗಿ ಹೆಗಲುಕೊಡಬೇಕಾಗಿದೆ.

ಕೆಲಸದ ವಿಪರೀತ ಒತ್ತಡ ಪೊಲೀಸ್ ಪೇದೆಗಳ ಮಾನಸಿಕ ಕ್ಷೋಭೆಗೆ ಕಾರಣವಾಗಿರುವ ಇನ್ನೊಂದು ಸಂಗತಿ. 69 ಸಾವಿರಕ್ಕೂ ಹೆಚ್ಚು ಪೊಲೀಸ್ ಪೇದೆಗಳು ಮತ್ತು ಮುಖ್ಯ ಪೇದೆಗಳು ರಾಜ್ಯದ ವಿವಿಧ ಠಾಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಠಾಣೆಯಲ್ಲಿನ ದೈನಿಕ ಚಟುವಟಿಕೆಗಳ ಜೊತೆಗೆ, ನಿಯಮಿತವಾಗಿ ನಡೆಯುವ ಪ್ರತಿಭಟನೆ, ಬಂದ್, ಗಣ್ಯರ ಭದ್ರತೆ, ಸಮಾವೇಶ, ಇತ್ಯಾದಿಗಳನ್ನು ನಿಭಾಯಿಸಬೇಕಾದ ಜವಾಬ್ದಾರಿಯನ್ನೂ ಲೆಕ್ಕಕ್ಕೆ ಹಿಡಿದರೆ ಪ್ರಸ್ತುತ ಇರುವ ಪೊಲೀಸರ ಸಂಖ್ಯೆ ತೀರಾ ಕಡಿಮೆ. ಸಿಬ್ಬಂದಿಯ ಕೊರತೆಯ ಕಾರಣದಿಂದಾಗಿ ಕೆಲವು ಸಂದರ್ಭಗಳಲ್ಲಿ ಮನೆಯ ಮುಖ ನೋಡದೇನೇ ಕೆಲಸ ಮಾಡುವ ಪರಿಸ್ಥಿತಿ ಇವರದು. ನಿಯಮದ ಪ್ರಕಾರ ವಾರಕ್ಕೊಂದು ಹಕ್ಕಿನ ರಜೆ ಇದೆ. ಆದರೆ ಈ ರಜೆ ಸಿಗುವುದು ಕೆಲವು ಅದೃಷ್ಟವಂತರಿಗೆ ಮಾತ್ರ. ರಜೆ ಪಡೆಯಲು ಕೆಲವೆಡೆ ಲಂಚ ನೀಡಬೇಕಾದ ಪರಿಸ್ಥಿತಿಯೂ ಇದೆ ಎನ್ನಲಾಗಿದೆ. ಬಿಡುವೇ ಇಲ್ಲದೆ ಕಾರ್ಯ ನಿರ್ವಹಿಸುವ ಸ್ಥಿತಿ ಪೇದೆಗಳ ಖಾಸಗಿ ಜೀವನವನ್ನು ಮೂರಾಬಟ್ಟೆಯಾಗಿಸುವ ಸಾಧ್ಯತೆಯಿದ್ದು, ಇದರಿಂದಾಗಿ ಕೂಡ ಅವರ ಮಾನಸಿಕ ಸ್ಥಿತಿ ಏರುಪೇರಾಗುವ ಅವಕಾಶವಿದೆ.

ಆತ್ಮಗೌರವ ಎನ್ನುವ ಮಾತಿಗೆ ಪೊಲೀಸ್ ಇಲಾಖೆಯಲ್ಲಿ ಅರ್ಥವೇ ಇದ್ದಂತಿಲ್ಲ. ಅಧಿಕಾರಿಗಳು ತಮ್ಮ ಕೈಕೆಳಗಿನವರನ್ನು ಕೊಳಕು ಭಾಷೆಯಲ್ಲಿ ಮಾತನಾಡುವುದು ಸ್ವಾಭಾವಿಕ ಎನ್ನುವಂತಾಗಿದೆ. ಹೇಳಿಕೇಳಿ, ಪೇದೆಗಳು ಪೊಲೀಸ್ ಇಲಾಖೆಯಲ್ಲಿ 'ಕನಿಷ್ಠ ಬಿಲ್ಲೆ'ಗಳು! ಅವರು ಕ್ಷೀಣ ಧ್ವನಿಯಲ್ಲಿ ಪ್ರತಿಭಟಿಸಿದರೂ ವರ್ಗಾವಣೆಯ ಆದೇಶ ಬೆನ್ನಿಗೇ ಇರುತ್ತದೆ. ಅನೇಕ ಸಂದರ್ಭಗಳಲ್ಲಿ ಸಜ್ಜನಿಕೆಯಿಂದ, ಪ್ರಾಮಾಣಿಕತೆಯಿಂದ ಬದುಕುವ ಅವಕಾಶಗಳನ್ನೂ ಇವರಿಗೆ ನಿರಾಕರಿಸಲಾಗುತ್ತಿದೆ ಎನ್ನಲಾಗಿದೆ. ತಮಗೆ ಒಪ್ಪಿಗೆ ಇರಲಿ, ಇಲ್ಲದಿರಲಿ– ಭ್ರಷ್ಟಾಚಾರದ ವರ್ತುಲದಲ್ಲಿ ಒಂದು ದಾಳವಾಗುವ ಅನಿವಾರ್ಯತೆ ಪೇದೆಗಳದು. ಹೀಗೆ, ಆತ್ಮಗೌರವಕ್ಕೆ ಘಾಸಿ ಮಾಡಿಕೊಂಡು, ಆತ್ಮಸಾಕ್ಷಿ ಕೊಂದುಕೊಂಡು ಬದುಕುವುದು ಅಸಹನೀಯ ಎಂದು ಕೆಲವರಿಗಾದರೂ ಅನ್ನಿಸಿದರೆ, ಅವರ ಅಸಹನೆ ಹಿಂಸಾತ್ಮಕ ರೂಪದಲ್ಲಿ ಹೊರಹೊಮ್ಮುವುದು ಸಾಧ್ಯವಿದೆ.

ಸಮಾಜದ ಕಾವಲುಗಾರನಂತೆ ಪೊಲೀಸ್ ಇಲಾಖೆ ಕಾರ್ಯ ನಿರ್ವಹಿಸುತ್ತದೆ. ಅಲ್ಲಿಯೇ ಸ್ವಾಸ್ಥ್ಯ ಕೆಟ್ಟರೆ ಅದರ ಪರಿಣಾಮ ಸಮಾಜದ ಮೇಲೂ ಉಂಟಾಗುತ್ತದೆ. ನಮ್ಮ ವಿದ್ಯಾರ್ಥಿಗಳು ಎಂಜಿನಿಯರ್, ವೈದ್ಯ, ಶಿಕ್ಷಕ ಆಗಬೇಕೆಂದು ಕನಸು ಕಾಣುತ್ತಾರೆ. ಆದರೆ, ಎಳೆಯರು ಮತ್ತು ಪೋಷಕರು ಹಂಬಲಿಸುವಂಥ ಉದ್ಯೋಗವಾಗಿ ಪೊಲೀಸ್ ನೌಕರಿ ಉಳಿದುಕೊಂಡಿಲ್ಲ. ಅಂಥದೊಂದು ಘನತೆ ಮತ್ತು ವರ್ಚಸ್ಸನ್ನು ತಂದುಕೊಡುವ ಕೆಲಸವನ್ನು ಸರ್ಕಾರ ಮಾಡಬೇಕಿದೆ. ಆ ಸುಧಾರಣೆ ಪೊಲೀಸ್ ಇಲಾಖೆಯ ಒಳಗಿನಿಂದಲೇ ಮೊದಲು ಆರಂಭ ಆಗಬೇಕು.

■ ರಘುನಾಥ ಚ.ಹ.



ಎಸ್.ವಿಷ್ಣು